ಅನ್ನವಾಗಬಹುದೆಂದು ಕಾಯುತ್ತಿದ್ದಳು. ಬಯಲು ಕಡೆಗೆ ಚರಿಗೆ ತೆಗೆದುಕೊಂಡು ಹೋದರೆ ಕುಳಿತಲ್ಲೇ ಕುಳಿತು ಬಿಡುತ್ತಿದ್ದಳು. ನಡು ರಾತ್ರಿಯಲ್ಲಿ ಎದ್ದು 'ನನ್ನ ಮಗು ಎಲ್ಲೋತು' ಎಂದು ಚೀರುತ್ತಿದ್ದಳು. ಇದು ಮನೆ ಮಂದಿಗೆ ಮೊದ ಮೊದಲು ಗಾಬರಿ ತರಿಸಿದರೂ ಇವಳ ಹುಚ್ಚುತನ ಒಂದರ್ಥದಲ್ಲಿ ಅವರಿಗೆ ವರವಾಯಿತು. ದೇವರಾಜನಿಗೆ ಮತ್ತೊಂದು ಮದುವೆ ಮಾಡಲು ಈಗ ಸಲೀಸು ಹಾದಿಯೊಂದು ತೆರೆದಂತಾಯಿತು.

ಪದ್ಮಾ ಮನೆಯಲ್ಲಿ ಯಾವ ಕೆಲಸವನ್ನೂ ಮಾಡದೇ ಭ್ರಮೆ ಹಿಡಿದವಳಂತೆ ಗೋಡೆಗೆ ಆತುಕೊಂಡು ಬಿಟ್ಟ ಕಣ್ಣು ಬಿಟ್ಟಂತೆ ಏನನ್ನಾದರೂ ದಿಟ್ಟಿಸುತ್ತ ಕುಳಿತು ಬಿಡುತ್ತಿದ್ದಳು. ಯಾವಾಗಲೋ ನಿದ್ದೆ, ಯಾವಾಗಲೋ ಏಳುತ್ತಿದ್ದಳು. ಅವರತ್ತೆ ಕೊಟ್ಟ ರೊಟ್ಟಿಯನ್ನು ಮನಸು ಬಂದರೆ ತಿನ್ನುತ್ತಿದ್ದಳು. ಇಲ್ಲವೆ ಅಲ್ಲೇ ಇಟ್ಟು ಅದನ್ನು ಕಣ್ಣಲ್ಲೇ ತಿನ್ನುವಂತೆ ನೋಡುತ್ತ ಕುಳಿತು ಬಿಡುತ್ತಿದ್ದಳು. ಜಳಕ ಮಾಡದೆ ತಿಂಗಳುಗಳೇ ಉರುಳಿದವು. ಮನೆ ಮಂದಿಯೆಲ್ಲಾ ಹೊಡೆದು ಬಡಿದು ನೋಡಿದರು. ಅವಳು ಸರಿಯಾಗಲಿಲ್ಲ. ಊರ ತುಂಬಾ ಪದ್ಮಾ ಹುಚ್ಚಿಯೆಂದು ಸುದ್ದಿಯಾಯಿತು. ಒಮ್ಮೊಮ್ಮೆ ಊರ ಬೀದಿಯಲ್ಲಿ ಸುಖಾಸುಮ್ಮನೆ ತಿರುಗತೊಡಗಿದಳು. ಒಂದೆರಡು ಸಲ ದೇವರಾಜ ಹುಡುಕಿಕೊಂಡು ಹೋಗಿ ಮನೆಗೆ ಕರೆತಂದ. ಆದರೆ, ಪದ್ಮಾ ಒಂದು ಕಡೆ ಕುಳಿತುಕೊಳ್ಳದೆ ಅಲೆಯತೊಡಗಿದಳು. ಮತ್ತೊಂದೆರಡು ದಿನ ಮನೆಗೆ ಬರಲೇ ಇಲ್ಲ. ನೋಡಿದರೆ ಊರ ಹನುಮಪ್ಪನ ಗುಡಿಯಲ್ಲಿ ಕುಳಿತಿದ್ದಳು. ರಾತ್ರಿ ಗುಡಿಯಲ್ಲೇ ಮಲಗಿರುವುದಾಗಿ ಜನ ಹೇಳಿದರು.

ದೇವರಾಜ, 'ಬಾ ಮನೆಗೆ ಹೋಗುಣ. ಇಲ್ಲೇನು ಮಾಡ್ತಿ ಗುಡಿಯಾಗ' ಎಂದು ಕೈ ಹಿಡಿದು ಎಳೆದ. ಅವಳು ಕೈ ಕೊಸರಿ ಇವನನ್ನು ಅಪರಿಚಿತನಂತೆ ನೋಡುತ್ತಾ, 'ನನ್ನ ಮಗ ಆಡಾಕ ಹೋಗ್ಯಾಣ. ಕರ್ಕೊಂಡು ಬರ್ತಿನಿ. ನಿ ನಡಿ. ಆ ಮ್ಯಾಲೆ ಬರ್ತಿನಿ...' ಅಂದಳು. ಮನೆಗೆ ಕರೆತರುವುದು ವ್ಯರ್ಥ ಪ್ರಯತ್ನವೆಂದು ಅವಳನ್ನು ಅಲ್ಲಿಯೇ ಬಿಟ್ಟು ದೇವರಾಜ ಮನೆಗೆ ನಡೆದ.

★★★

ದೇವರಾಜನ ಅಪ್ಪಅವ್ವ ಅಲ್ಲಿ ಇಲ್ಲಿ ಕನ್ಯೆ ನೋಡತೊಡಗಿದರು. ಎರಡನೇ ಸಂಬಂಧವಾದ್ದರಿಂದ ಇನ್ನೂ ಮೇಳೈಸಿರಲಿಲ್ಲ. ತಮ್ಮ ಸಂಬಂಧಿಕರಿಗೆ, ಪರಿಚಯದವರಿಗೆ ಕನ್ಯೆ ನೋಡಲು ಹೇಳಿ ತಾವೂ ಹುಡುಕತೊಡಗಿದರು. ಪದ್ಮಾ ಹುಚ್ಚಿಯಂತೆ ಬೀದಿ ಬೀದಿ ಅಲೆಯುತ್ತಾ ಅವರಿವರು ಕೊಟ್ಟ ಊಟ ತಿನ್ನುತ್ತಾ, ರಾತ್ರಿ ಹನುಮಪ್ಪನ ಗುಡಿಯಲ್ಲೇ ತಂಗುತ್ತಿದ್ದಳು. ಅವಳು ಹೆಚ್ಚು ಅನ್ಯಮನಸ್ಕಳಾಗಿ ಗರ ಬಡಿದಂತೆ ಕುಳಿತು ಬಿಡುತ್ತಿದ್ದಳು. ಎಚ್ಚರವಾದಾಗ, 'ನನ್ನ ಮಗು ಎಲ್ಲೋತು' ಅನ್ನುತ್ತಿದ್ದಳು. ನೋಡಿದವರು 'ಪಾಪ, ಈ ಪರಿಸ್ಥಿತಿ ಯಾವ ಹೆಣ್ಣಿಗೂ ಬರಬಾರ್ದು...' ಎಂದು ಮರುಗುತ್ತಿದ್ದರು.

ಗುಡಿಯಲ್ಲಿ ಮಲಗಿದ್ದ ಪದ್ಮಾ ಒಂದು ದಿನ ಬೆಳಗಿನ ಜಾವ ಹನುಮಪ್ಪನ ಕಲ್ಲಿನ ಮೂರ್ತಿಗೆ, 'ಏಯ್, ನನ್ನ ಮಗು ಎಲ್ಲಿ. ನೀನೇ ಕಳ್ಳತನ ಮಾಡಿದ್ದು. ಸರಳ ಕೊಡ್ತಿಯೋ ಇಲ್ವೊ. ಇಲ್ಲಾ ನಿನ್ನ ಪರಿಸ್ಥಿತಿ ನೆಟ್ಟಗ ಇರಲ್ಲ ನೋಡು. ಆ ಮ್ಯಾಲೆ ತಲೆ ಕೆಟ್ಟರೆ ನಾನು ಮನಷ್ಯಳೇ ಅಲ್ಲ. ಏನು ಮಾಡ್ತಿನೋ ನನ್ಗ ಗೊತ್ತಿಲ್ಲ. ಸುಮ್ನ ಕೊಟ್ಟು ಬಿಡು. ನೀನಾ ಕಳ್ಳತನ ಮಾಡಿಯಂಥ ಯಾರಿಗೂ ಹೇಳಲ್ಲ ಆಯ್ತು. ನಿನ್ಗೆ ಹೇಳ್ತಿರೋದು. ಸುಮ್ನ ನಿಂತಿಯಲ ಕಲ್ಲು ನಿಂತಂಗ. ಇಲ್ಲಿ ಒದರ್ತಿದಿನಿ. ಜಪ್ಪು ಅನ್ನವಲ್ಲಿ. ಕೊಡು ಅಂದೆ. ಒಂದು, ಎರಡು, ಮೂರು ಎಣಿಸ್ತಿನಿ. ಅಷ್ಟರೊಳಗ ಕೊಡು. ಒಂದು, ಎರಡು, ಮೂರು. ಹೇ ಕೊಡ್ತಿಯೋ ಇಲ್ಲ...' ಅಂತ